ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಲಬುರಗಿ.

ದೂರವಾಣಿ: 08472-278601, 278605 ಫ್ಯಾಕ್ಸ್: 278602, E-mail: deo.kalaburagi@gmail.com

ಸಂ/ಕಂ/ಭೂ.ಸ್ವಾ/ 37 /2020-21

ದಿನಾಂಕ :- 13.01.2022

## ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಕುರಿತು ಸಾರ್ವಜನಿಕ ಅಹವಾಲುಸಭೆ ಬಗ್ಗೆ ಪ್ರಕಟಣೆ

ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ತೆಗ್ಗಳ್ಳಿ ಗ್ರಾಮದ ಜಮೀನುಗಳು ಸಣ್ಣ ನೀರಾವರಿ ಯೋಜನೆಯಡಿ ಬ್ರಿಡ್ಜ್- ಕಂ ಬ್ಯಾರೇಜ್ ನಿರ್ಮಾಣಕ್ಕಾಗಿ ಭೂಸ್ವಾಧೀನಗೊಳ್ಳುತ್ತಿರುವ ಜಮೀನುಗಳ ಭಾದಿತ ಭೂ ಮಾಲೀಕರೊಂದಿಗೆ ಆಡಳಿತಾಧಿಕಾರಿಗಳು, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ರವರಿಂದ ದಿನಾಂಕ: 24.08.2021 ರಂದು ಅನುಮೋದನೆಗೊಂಡಿರುವ (ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಕರಡು ಯಾದಿ 16(2) ) ಕುರಿತು ಸಾರ್ವಜನಿಕ ಅಹವಾಲು ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಈ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಜಮೀನನ್ನು ಕಳೆದುಕೊಂಡು ಭಾದಿತರಾಗುತ್ತಿರುವ ಭೂಮಾಲೀಕರು ಸಾರ್ವಜನಿಕರು ಈ ಸಭೆಯಲ್ಲಿ ಹಾಜರಾಗಲು ಕೋರಿದೆ

| | |
|---|---|
| ಭೂಸ್ವಾಧೀನದ ಉದ್ದೇಶ | ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ತೆಗ್ಗಳ್ಳಿಗ್ರಾಮದ ಜಮೀನುಗಳು ಸಣ್ಣ ನೀರಾವರಿ ಯೋಜನೆಯಡಿ ಬ್ರಿಡ್ಜ್- ಕಂ ಬ್ಯಾರೇಜ್ ನಿರ್ಮಾಣಕ್ಕಾಗಿ |
| ಭೂ ಸ್ವಾಧೀನಕ್ಕೆ ಒಳಪಡುವ ಗ್ರಾಮ | ತೆಗ್ಗಳ್ಳಿ ಗ್ರಾಮ |
| ತಾಲ್ಲೂಕು | ಅಫಜಲಪೂರ |
| ಒಟ್ಟು ವಿಸ್ತೀರ್ಣ | 02-00 (ಎ-ಗು) ಸರ್ವೆ ನಂ:-40/4 |
| ಸಾರ್ವಜನಿಕ ಅಹವಾಲು | ತೆಗ್ಗಳ್ಳಿ ಗ್ರಾಮದ ಸಂಬಂಧಿಸಿದ ಭೂ ಮಾಲೀಕರು ದಿನಾಂಕ: 03-02-2022 ರಂದು ಬೆಳಿಗ್ಗೆ/ 11.30 ಕ್ಕೆ 'ಬಂದರವಾಡ' ಗ್ರಾಮ ಪಂಚಾಯಿತಿಯಲ್ಲಿ |

13/1

ಅಪರ ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿ
ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ,
ಜಿಲ್ಲಾಧಿಕಾರಿಗಳ ಕಛೇರಿ ಕಲಬುರಗಿ ಜಿಲ್ಲೆ

ಕರಡು ಯಾದಿಯ ಪ್ರತಿಗಳನ್ನು (ತಕ್ಷಣದಿಂದ ತುರ್ತಾಗಿ ಕ್ರಮ ಕೈಗೊಳ್ಳುವುದು)

1. ಭೂ ಕೋರಿಕೆ ಇಲಾಖೆಯವರಾದ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ , ಕಲಬುರಗಿ ಇವರು ತಮ್ಮ ಕಾರ್ಯಾಲಯದ ಸೂಚನಾ ಫಲಕಕ್ಕೆ ಲಗತ್ತಿಸಿ ಪ್ರಚುರ ಪಡಿಸಿದ ದಿನಾಂಕವನ್ನು ಈ ಕಛೇರಿಗೆ ಸಲ್ಲಿಸುವುದು ಮತ್ತು ಸದರಿ ಸಬೆಗೆ ತಪ್ಪದೇ ಹಾಜರಾಗುವುದು
2. ಸಹಾಯಕ ಆಯುಕ್ತರು, ಕಲಬುರಗಿ ಇವರಿಗೆ ಈ ವಿಷಯದ ಕುರಿತಾಗಿ ತಮ್ಮ ಕಾರ್ಯಾಲಯದ ಸೂಚನಾ ಫಲಕ್ಕೆ ಲಗತ್ತಿಸಿ ಪ್ರಚುರಪಡಿಸಿ, ಪ್ರಚುರ ಪಡಿಸಿದ ದಿನಾಂಕವನ್ನು ಈ ಕಛೇರಿಗೆ ಸಲ್ಲಿಸುವುದು ಮತ್ತು ಸದರಿ ಸಬೆಗೆ ಹಾಜರಾಗುವುದು

3. ತಹಶೀಲ್ದಾರರು, ಅಫಜಲ;ಪೂರ ಇವರಿಗೆ ಈ ವಿಷಯದ ಕುರಿತಾಗಿ ತಮ್ಮ ಕಾರ್ಯಾಲಯದ ಸೂಚನಾ ಫಲಕಕ್ಕೆ ಲಗತ್ತಿಸಿ ,ಪ್ರಚುರಪಡಿಸಿದ ದಿಣಾಂಕವನ್ನು ಈ ಕಛೇರಿಗೆ ಕೂಡಲೇ ಸಲ್ಲಿಸುವುದು ಮತ್ತು ಸದರಿ ಸಭೆಗೆ ಹಾಜರಾಗುವುದು
4. ಉಪ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಕಲಬುರಗಿರವರಿಗೆ ಈ ಕುರಿತು ದ್ವಿ- ಪ್ರತಿಗಳನ್ನು ಕಳುಹಿಸುತ್ತಾ ಸದರಿ ವಿಷಯವನ್ನು ವಾರ್ತಾ ಇಲಾಖೆ ಮಾಧ್ಯಮ ಪಟ್ಟಿಯಲ್ಲಿರುವ ಎರಡು ಸ್ಥಳೀಯ ದಿನಪತ್ರಿಕೆಗಳಲ್ಲಿ ಸರದಿ ಪ್ರಕಾರ ಪ್ರಕಟಪಡಿಸಿ ಅವುಗಳ ಪ್ರತಿಗಳ್ಳು ಬಿಲ್ಲಿನೊಂದಿಗೆ ವಿಶೇಷ ಭೂ-ಸ್ವಾಧೀನಾಧಿಕಾರಿಗಳು, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಕಲಬುರಗಿ ಇವರಿಗೆ ಕಳುಹಿಸಲು ತಿಳಿಸಿದೆ.
5. **ಜಿಲ್ಲಾ ಮಾಹಿತಿ ಅಧಿಕಾರಿಗಳು, ರಾಷ್ಟ್ರೀಯ ಸೂಚನಾ ಕೇಂದ್ರ (NIC) ಜಗತ್ ವೃತ್ತದ ಹತ್ತಿರ ಕಲಬುರಗಿ ಇವರಿಗೆ ಸದರಿ ವಿಷಯದ ಕುರಿತಾಗಿ ಜಿಲ್ಲಾ ವೆಬ್ ಸೈಟ್ ತಾಣದಲ್ಲಿ ಪ್ರಕಟಿಸಲು ತಿಳಿಸಿದೆ.**
6. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ, ಕಲಬುರಗಿ ಇವರಿಗೆ ಕಳುಹಿಸುತ್ತಾ ಸದರಿ ವಿಷಯದ ಕುರಿತಾಗಿ ಪ್ರಚಾರ ಪಡಿಸಲು ಕೋರಿದೆ.
7. ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕಾ ಪಂಚಾಯತ್ ಅಫಜಲಪೂರ ಇವರಿಗೆ ತಮ್ಮ ಕಛೇರಿಯ ಸೂಚನಾ ಫಲಕಕ್ಕೆ ಲಗತ್ತಿಸಿ ಪ್ರಚುರಪಡಿಸುವುದು ಮತ್ತು ಪ್ರಚುರಪಡಿಸಿದ ದಿನಾಂಕವನ್ನು ಈ ಕಛೇರಿಗೆ ಕೂಡಲೇ ಸಲ್ಲಿಸುವುದು
8. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, (P.D.O.) ಬಂದರವಾಡ ಇವರು ತಮ್ಮ ಕಾರ್ಯಾಲಯದ ಸೂಚನಾ ಫಲಕಕ್ಕೆ ಲಗತ್ತಿಸಿ ಸದರಿ ವಿಷಯದ ಕುರಿತಾಗಿ ಪೋಸ್ಟರ್ ಮೂಲಕ ಮತ್ತು ಡಂಗುರ ಸಾರಿಸುವ ಮೂಲಕ ಪ್ರಚುರಪಡಿಸುವುದು ಮತ್ತು ಪ್ರಚುರಪಡಿಸಿದ ದಿನಾಂಕವನ್ನು ಈ ಕಛೇರಿಗೆ ಕೂಡಲೇ ಸಲ್ಲಿಸುವುದು.
9. ಗ್ರಾಮ ಲೆಕ್ಕಿಗರು (V.A.) ತೆಗ್ಗಳ್ಳಿ ಮತ್ತು ಕಂದಾಯ ನಿರೀಕ್ಷಕರು ಅತನೂರ ರವರಿಗೆ ತಮ್ಮ ಕಾರ್ಯಾಲಯದಲ್ಲಿ ಸೂಚನಾ ಫಲಕದಲ್ಲಿ ಲಗತ್ತಿಸಿ ಪ್ರಚುರಪಡಿಸಿದ ದಿನಾಂಕವನ್ನು ಈ ಕೂಡಲೇ ಕಛೇರಿಗೆ ಸಲ್ಲಿಸುವುದು ಮತ್ತು ಸದರಿ ಸಭೆಗೆ ಹಾಜರಾಗುವುದು
10. ಸಂಬಂಧಿಸಿದ ಭೂ ಮಾಲೀಕರು ಸದರಿ ಸಭೆಗೆ ತಪ್ಪದೇ ಹಾಜರಾಗುವದು (ತಹಶೀಲ್ದಾರರು ಅಫಜಲಪೂ ರವರ ಮುಖಾಂತರ)

## ಆಡಳಿತಾಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಕಲಬುರಗಿ

ಸಂಖ್ಯೆ:-ಸನೀ/09/2019-20

**ಸಣ್ಣ ನೀರಾವರಿ ಯೋಜನೆಯಡಿ ಭೂಸ್ವಾಧೀನವಾದ ಜಮೀನು ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ತೇಗ್ಗಳ್ಳಿ ಗ್ರಾಮದ ಜಮೀನುಗಳನ್ನು ಬ್ರಿಡ್ಜ-ಕಂ-ಬ್ಯಾರೇಜ್ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳತ್ತಿದ್ದು ಈ ಬಾಬ್ತು ಭೂ ಮಾಲೀಕರಿಗಾಗಿ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 31(1) ರನ್ವಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬಗ್ಗೆ ಕಲಂ 16(2) ರನ್ವಯ ವರದಿ.**

1. ಸಂತ್ರಸ್ಥ ಕುಟುಂಬಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕರಡು ಪರಿ ಯೋಜನೆ ಕುರಿತು ನಿಯಮಗಳಲ್ಲಿ ಉಪಬಂಧಿಸುವ ರೀತಿಯಲ್ಲಿ ಬಾದಿತ ಕುಟುಂಬಗಳಿಗೆ ಅರಿವು ಮೂಡಿಸಲಾಗಿದೆ.
2. ನ್ಯಾಯೋಚಿತ ಪರಿಹಾರಕ್ಕೆ ಭೂಸ್ವಾಧೀನ ಪ್ರಕ್ರಿಯಲ್ಲಿ ಪಾರದರ್ಶಕತೆ ಸೂಕ್ತ ಪರಹಾರ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಅಧಿನಿಯಮ-2013 ಕಲಂ 11(1)ರಡಿ ದಿನಾಂಕ 22-08-2019 ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುತ್ತದೆ.
3. ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕರಡು ಪಟ್ಟಿಯನ್ನು ಕಲಂ11(1)ರ ಅಧಿಸೂಚನೆ ಪ್ರಕಟಣೆ, ಸಂಯುಕ್ತ ಮೋಜಣಿಯ ಸರ್ವೆ ಗಣತಿ, ಮನೆ ಮನೆ ಸಮೀಕ್ಷಾ ರವದಿ ಹಾಗೂ ಭೂಮಾಲೀಕರು ಖುದ್ದಾಗಿ ನೀಡಿದ ಹೇಳಿಕೆ ಹಾಗೂ ಹಾಜರು ಪಡಿಸಿದ ಭೂಹಿಡುವಳಿ ಪ್ರಮಾಣಪತ್ರ(ಪಹಣಿ) ಆಧಾರವಾಗಿ ಇಟ್ಟುಕೊಂಡು ತಯಾರಿಸಲಾಗಿದೆ.
4. ಸದರಿ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಸರ್ಕಾರಿ ಕಟ್ಟಡಗಳು ಯಾವುವೂ ಇರುವುದಿಲ್ಲ. ಅಥವಾ ಒಳಪಟ್ಟರುವುದಿಲ್ಲ.
5. ಈ ಕರಡು ಪಟ್ಟಿಯನ್ನು ಭೂಸ್ವಾಧೀನ ಕಾಯ್ದೆ-2013ರ ಕಲಂ16, 16(4), 16(5) ರನ್ವಯ ಕ್ಲೇಮು ಹಾಗೂ ಆಕ್ಷೇಪಣೆಗಳ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿ ಹಾಗೂ ದಿನಾಂಕ -06-2021 ರಂದು ಗ್ರಾಮಸಭೆಯನ್ನು ಆಯೋಜಿಸಿ ತಯಾರಿಸಲಾಗಿದೆ. ಸಂಧರ್ಭಾನುಸಾರ ಈ ಪಟ್ಟಿಯಲ್ಲಿನ ಅಂಶಗಳನ್ನು ಬದಲಾವಣೆಗೆ ಒಳಪಡಿಸಬಹುದಾಗಿದೆ.
6. ಸಣ್ಣ ನೀರಾವರಿ ಯೋಜನೆಯಡಿ ಭೂಸ್ವಾಧೀನವಾದ ಜಮೀನು ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ತೇಗ್ಗಳ್ಳಿ ಗ್ರಾಮದ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಿತ್ತಿರುವ ಕುಟುಂಬಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಅಧಿನಿಯಮದ 2013ರ ಕಲಂ 31 ರನ್ವಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಸಂಬಂದ ಐತೀರ್ಪು ರಚಿಸುವ ಸಂದರ್ಭದಲ್ಲಿ ಭೂಮಾಲೀಕರ ಹೇಳಿಕೆ ಮತ್ತು ದಾಖಲೆಗಳೊಂದಿಗೆ ಪರಿಶೀಲಿಸಿ ಭಾಧಿತಗೊಳ್ಳುವ ಭೂ ಮಾಲೀಕರು ಅವರು ಹೊಂದಿರುವ ಒಟ್ಟು ಜಮೀನಿಗೆ ಹೋಲಿಸಿದ್ದು, ಭೂಸ್ವಾಧೀನವಾಗುವ ಪ್ರದೇಶವು ಶೇ 50% ಕ್ಕಿಂತ ಹೆಚ್ಚು ಜಮೀನನ್ನು ಕಳೆದೊಳ್ಳುವ ಭೂಮಾಲೀಕರ ಒಟ್ಟು ಹಿಡುವಳಿ ಮತ್ತು ವಾರ್ಷಿಕ ಆದಾಯವನ್ನು ಪಡೆದು ಹೊಸ ಭೂಸ್ವಾಧೀನ ಕಾಯ್ದೆ -2013 ರನ್ವಯ ಕ್ರಮಕೈಗೊಳ್ಳಲಾಗುವುದು.
7. ಜೆ.ಎಂ.ಸಿ ವರದಿ ಆಧರಿಸಿ ಭೂಸ್ವಾಧೀನ ಕಾಯ್ದೆ-2013ರನ್ವಯ ನಿಯಮಾನುಸಾರ ವಿಶೇಷ ಭೂಸ್ವಾಧೀನಾಧಿಕಾರಿಗಳು ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆ ಕಲಬುರಗಿ ರವರು ಕ್ರಮ ಜರುಗಿಸಿರುತ್ತಾರೆ.
8. ಜೆ.ಎಂ.ಸಿ ಪ್ರಕಾರ ಒಂದು ಸರ್ವೆ ನಂಬರನಲ್ಲಿ ಒಂದಕ್ಕಿಂತ ಹೆಚ್ಚಿನ ಭೂಮಾಲಿಕರು ಜಂಟಿಯಾಗಿದ್ದಲ್ಲಿ ಅವರನ್ನು ಈ ಪಟ್ಟಿಯಲ್ಲಿ ಪ್ರತ್ಯೇಕ ಕುಟುಂಬವೆಂದು ಪರಿಗಣಿಸಿ ಪಟ್ಟಿ ತಯಾರಿಸಲಾಗಿದೆ. ಐತೀರ್ಪು ರಚನೆ ಸಂಧರ್ಭದಲ್ಲಿ ಜಂಟಿ ಮಾಲೀಕರನ್ನು ಕುಟುಂಬವೆಂದು ಪರಿಗಣಿಸಿಬಹುದು ಅಥವಾ ಜಂಟಿ ಕುಟುಂಬವೆಂದು ತೀರ್ಮಾನಿಸಬಹುದಾಗಿದೆ.
9. ಗಣತಿ ಸಮೀಕ್ಷಾ ಕಾರ್ಯದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳ ಭೂಮಾಲೀಕರು ತಮ್ಮ ಕುಟುಂಬದ ಸದಸ್ಯರ ದಾಖಲೆಗಳನ್ನು ನೀಡಿರುತ್ತಾರೆ ಹಾಗೂ ಅವರ ಸಹಿಯಿಂದ ದೃಢಿಕರಸಿದ್ದಾರೆ.
10. ಪರಿಹಾರ ಧನ ಪಾವತಿ ಸಮಯದಲ್ಲಿ ಸಂಬಾಧಪಟ್ಟ ತಹಶೀಲ್ದಾರರವರಿಂದ ಒಟ್ಟು ಭೂ ಹಿಡುವಳಿ ಬಗ್ಗೆ ಮಾಹಿತಿಯನ್ನು ಪಡೆದು ಕ್ರಮ ಜರುಗಿಸಲಾಗುತ್ತದೆ.
11. ಕಲಂ 16(2) ಪರಿಷ್ಕೃತ ಕರಡು ಪಟ್ಟಿಯಲ್ಲಿ ಬಾಧಿತಗೊಳ್ಳುವ ಕುಟುಂಬದ ಎಲ್ಲಾ ವಯಸ್ಕ ಸದಸ್ಯರು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ದಿನಾಂಕ -06-2021 ರಂದು ಮುಂಚಿತವಾಗಿ ತಿಳೀಸಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ಹಾಜರಾಗಿ ಅವರುಗಳು ಕ್ಲೇಮು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಿರುವ ಬಗ್ಗೆ ಪರಿಶೀಲಿಸಿ ಕರಡು ಪಟ್ಟಿಯಲ್ಲಿ ಸೂಕ್ತ ಮಾರ್ಪಡು ಮಾಡಲಾಗಿದೆ/ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸುವ ಬಗ್ಗೆ ತಯಾರಿಸಿರುವ ವರದಿಗೆ ಸಮಿತಿಯು ದಿನಾಂಕ -06-2021 ರಂದು ಅಂಗೀಕಾರ ನೀಡಿದೆ.
12. ಗಜಲಾಪೂರ-ಕೊಂಪಳ್ಳಿ-ಮುಧೋಳ ಗ್ರಾಮದ ಪ್ರಕರಣಗಳ ಬಗೆಗಿನ ಕಲಂ 11(1)ರ ಅಧಿಸೂಚನೆಯ ಅನ್ವಯ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದಿರಿಂದ ಹೊಸ ಭೂಸ್ವಾಧೀನ ಕಾಯ್ದೆಯ ಕಲಂ 45ರ ನಿಬಂಧನೆಗಳಿಗೆ ಅನ್ವಯಿಸುವುದಿಲ್ಲ. ಅನುಸಾರವಾಗಿ ಈ ಗ್ರಾಮದಲ್ಲಿ ಒಟ್ಟು ಕುಟುಂಬಗಳನ್ನು ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಸೌಲಭ್ಯಕ್ಕೆ ಅರ್ಹ ಎಂದು ಗುರುತಿಸಿ ಈ ಬಗ್ಗೆ ದಿನಾಂಕ 06-2021 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಸಮಿತಿ ಸಭೆಯಲ್ಲಿ ಅನುಮೊದನೆ ಪಡೆಯಲಾಗಿದೆ.
13. ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಕಾಯ್ದೆ, ನಿಯಮಗಳ ಅನ್ವಯ ಸದರಿ ಕರಡುಯಾದಿಯು ಬದಲಾವಣೆಗೆ ಒಳಪಟ್ಟಿರುತ್ತದೆ. ಸಣ್ಣ ನೀರಾವರಿ ಯೋಜನೆಯಡಿ ಭೂಸ್ವಾಧೀನಕ್ಕೆ ಒಳಪಟ್ಟ ಭಾದಿತ ಕುಟುಂಬಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಅಧಿನಿಯಮ-2013 (The Right it Fair Compensation Transparency in Land Acquisition and Resettlement Act-2013) ರ ಅನುಸಾರ ಈ ಯೋಜನೆಯ ಭೂಸ್ವಾಧೀನದಿಂದಾಗಿ ಗಜಲಾಪೂರ-ಕೊಂಪಳ್ಳಿ-ಮುಧೋಳ ಗ್ರಾಮದ ಒಟ್ಟು —— ಬಾಧಿತ

ಕುಟುಂಬಗಳು ತಮ್ಮ ಹಿಡುವಳಿ ಜಮೀನಿನಲ್ಲಿ ಶೇ 50% ಕ್ಕಿಂತ ಹೆಚ್ಚು ಜಮೀನನ್ನು ಕಳೆದುಕೊಳ್ಳುತ್ತಿವೆ. ಈ ಕುಟುಂದಗಳ ಜೀವನೋಪಾಯದ ಮೂಲ ಆಧಾರವೇ ಈ ಜಮೀನು ಆಗಿರುವುದರಿಂದ ಈ ಕುಟುಂಬಗಳ ಜೀವನೋಪಾಯಕ್ಕೆ ( Primary Source of Livelihood ) ಧಕ್ಕೆ ಉಂಡಾಗುತ್ತಿದೆ. ಪ್ರಯುಕ್ತ ಈ ———————— ಭಾದಿತ ಕುಟುಂಬಗಳನ್ನು ಪುನರ್ವಸತಿ ಮತ್ತು ಪುನರ ನಿರ್ಮಾಣ ಸೌಲಭ್ಯಕ್ಕೆ ಅರ್ಹವಲ್ಲ ಎಂಬುದಾಗಿ ಪರಿಗಣಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು
ಕನೀನಿನಿ ಬೆಣ್ಣೆತೋರಾ ಯೋಜನೆ
ಕಲಬುರಗಿ.

ಅಪರ ಜಿಲ್ಲಾಧಿಕಾರಿಗಳು ಹಾಗೂ
ಪದನಿಮಿತ್ತ ಪುನರ್‌ವಸತಿ ಅಧಿಕಾರಿಗಳು
ಕಲಬುರಗಿ.